**ಸಿವಿಲ್ ನ್ಯಾಯಾಧೀಶರು ಮತ್ತು ಜೆ .ಎಂ. ಎಫ್. ಸಿ ನ್ಯಾಯಾಲಯ ಸಿಂದಗಿ**

ಸಿ.ಸಿ.ನಂಬರ್ : 2415/2022

ಪಿ.ಡಬ್ಲ್ಯೂ : 3 ಸಿ.ಡಬ್ಲ್ಯೂ 1

ಸಾಕ್ಷಿಗೆ ಇಂದು ದಿನಾಂಕಃ 27.11.2025 ರಂದು ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು ಆರೋಪಿ ಪರ ಶ್ರೀ ಪಿ ಎಸ್ ಬಿ ವಕಿಲರಿಂದ**

1 ನೇ ಆರೋಪಿ ಹಾಗೂ ಆತನ ತಾಯಿಯಾದ ಅನುಸುಬಾಯಿಯವರು ಚಿಕ್ಕೋಡಿಯಲ್ಲಿರುತ್ತಾರೆ ಎಂದರೆ ಸರಿ. ನಮ್ಮ ಜಮೀನು ಹಾಗೂ ಸದರಿಯವರ ಜಮೀನುಗಳು ಅಂಟಿಕೊಂಡಿರುತ್ತವೆ ಎಂದರೆ ಸರಿ. ಸಾಕ್ಷಿಗೆ ಘಟನೆ ಯಾವಾಗ ನಡೆದಿರುತ್ತದೆ ಎಂದರೆ 22 ನೇ ತಾರೀಖಿನಂದು ನಡೆದಿದ್ದು ಘಟನೆ ನಡೆದು ಸುಮಾರು 2,3 ವರ್ಷ ಆಗಿರುತ್ತದೆ. ಘಟನೆಯ ನಂತರ ಚಾ ಸಾ 2 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುವದಾಗಿ ಹೇಳಿದ್ದು ಎಲ್ಲಿ ಕರೆದುಕೊಂಡು ಹೋಗಿದ್ದಿರಿ ಎಂದರೆ ಸಾಕ್ಷಿ ವಿಜಯಪುರದ ಆಯುಷ್ಟ ಆಸ್ಪತ್ರೆಗೆ ಎಂದು ಹೇಳುತ್ತಾರೆ. ಅದಕ್ಕೂ ಬೇರೆ ಎಲ್ಲಿಯು ತೋರಿಸಿರುವುದಿಲ್ಲವೆ ಎಂದರೆ ಸಾಕ್ಷಿ ಕಲಕೇರಿಯಲ್ಲಿ ತೋರಿಸಿದ್ದೆ ಎಂದು ನುಡಿದಿರುತ್ತಾರೆ. ಅಸ್ಪತ್ರೆಯಲ್ಲಿ ಎಷ್ಟು ದಿನಗಳ ಕಾಲ ಇದ್ದೀರಿ ಎಂದರೆ ಸಾಕ್ಷಿ 1 ತಿಂಗಳ ಕಾಲ ಎಂದು ನುಡಿದಿರುತ್ತಾರೆ. ನಾವು 1 ತಿಂಗಳ ಕಾಲ ಆಸ್ಪತ್ರೆಯಲ್ಲಿದ್ದೆನು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆ ಯಾವ ಕಾರಣಕ್ಕೆ ಆಗಿರುತ್ತದೆ ಎಂದು ಗೊತ್ತಿರುತ್ತದೆಯೇ ಎಂದರೆ ಸಾಕ್ಷಿ ನಾವು ಹೊಲದಲ್ಲಿ ಕೆಲಸ ಮಾಡುವಾಗ ಬಂದು ಹೊಡೆದಿರುತ್ತಾರೆ ಎಂದು ನುಡಿದಿರುತ್ತಾರೆ.

ಯಾರೂ ವಿನಾ ಕಾರಣ ಬಂದು ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಘಟನೆ ನಡೆದ ಸ್ಥಳದ ಚೆಕ್ಕಬಂದಿ ಕೇಳಲಾಗಿ ಸಾಕ್ಷಿ ಪೂರ್ವ ದಿಕ್ಕಿಗೆ ನನ್ನ ಚಿಕ್ಕಪ್ಪನಾದ ಬಾಬು ಚವಾಣ ಜಮೀನು, ಪಶ್ಚಿಮ ದಿಕ್ಕಿಗೆ ಆರೋಪಿತರ ಹೊಲ, ದಕ್ಷಿಣ ದಿಕ್ಕಿಗೆ ರವಿ

ಚವ್ಹಾಣ ಮತ್ತು ಉತ್ತರಕ್ಕೆ ಲಕ್ಷ್ಮೀಬಾಯಿ ಕೋಳುರವರ ಹೊಲ ಇರುತ್ತದೆ. ಈಗ ನಾನು ಹೇಳುತ್ತಿರುವ ಚೆಕ್ಕಬಂದಿ ಮಧ್ಯದಲ್ಲಿ ನನ್ನ ಜಮೀನು ಇರುತ್ತದೆ ಎಂದರೆ ಸರಿ.

ಘಟನೆಯಾದ ಎಷ್ಟು ದಿನಗಳ ನಂತರ ದೂರನ್ನು ನೀಡಿರುತ್ತೀರಾ ಎಂದರೆ ಸಾಕ್ಷಿ 3-4 ದಿನಗಳ ನಂತರ ದೂರನ್ನು ನೀಡಿರುತ್ತೇವೆ ಎಂದು ನುಡಿದಿರುತ್ತಾರೆ. ದೂರನ್ನು ಕೊಡಲು ಯಾರು ಹೋಗಿದ್ದಿರಿ ಎಂದರೆ ಸಾಕ್ಷಿ ನಾನು ಮತ್ತು ಚಾ ಸಾ 2 ರವರು ಹೋಗಿದ್ದೆವು ಎಂದು ನುಡಿದಿರುತ್ತಾರೆ. ಪಂಚನಾಮೆ ಮಾಡಲು ಯಾವಾಗ ಬಂದಿದ್ದರು ಎಂದರೆ ಸಾಕ್ಷಿ ಅಷ್ಟಾಗಿ ನೆನಪಿರುವುದಿಲ್ಲ ಎಂದು ನುಡಿದಿರುತ್ತಾರೆ. ಪಂಚನಾಮೆ ಕಾಲಕ್ಕೆ ಯಾರೆಲ್ಲ ಇದ್ದರೂ ಎಂದರೆ ಸಾಕ್ಷಿ ರಾಮ ಜೈರಾಮ ರಾಠೋಡ ಮತ್ತು ದೀಪಕ ಜಾಧವ ಇದ್ದರು ಎಂದು ನುಡಿದಿರುತ್ತಾರೆ. ದೀಪಕ ಚಾ ಸಾ 3 ರವರು ಪಡಗಾನೂರ ಗ್ರಾಮದವರು ಎಂದರೆ ಸರಿ. ಚಾ ಸಾ 3 ರವರನ್ನು ಪಂಚನಾಮೆಗೆ ನೀವು ಕರೆದುಕೊಂಡು ಬಂದಿದ್ದೀರಾ ಅಥವಾ ಪೋಲಿಸರು ಕರೆದಿದ್ದರಾ ಎಂದರೆ ಸಾಕ್ಷಿ ಸದರಿಯವರು ನಮ್ಮ ಸಂಬಂಧಿಕ ಇದ್ದು ಆ ಸಮಯದಲ್ಲಿ ನಮ್ಮ ಮನೆಯಲ್ಲಿದ್ದರು ಎಂದು ನುಡಿದಿರುತ್ತಾರೆ. ಪಂಚನಾಮೆಯನ್ನು ಎಷ್ಟು ಸಮಯಕ್ಕೆ ಮಾಡಿರುತ್ತಾರೆ ಎಂದರೆ ಸಾಕ್ಷಿ ಬೆಳಿಗ್ಗೆ 10 ಗಂಟೆ ಆಗಿರಬಹುದು ಎಂದು ನುಡಿದಿರುತ್ತಾರೆ. ಪಂಚನಾಮೆ ಎಷ್ಟು ಗಂಟೆಯಿಂದ ಎಷ್ಟು ಗಂಟೆವರೆಗೆ ಮಾಡಿರುತ್ತಾರೆ ಎಂದರೆ ಸಾಕ್ಷಿ ಅಷ್ಟಾ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

ಘಟನೆ ನಡೆದಾಗ ಹೊಲದಲ್ಲಿ ಯಾವ ಬೆಳೆದಿದ್ದೀರಿ ಹೊಲ ಖಾಲಿ ಇದ್ದು ನೀರನ್ನು ಬಿಡುತ್ತಿದ್ದೆವು ಎಂದು ನುಡಿದಿರುತ್ತಾರೆ. ಪಕ್ಕದಲ್ಲಿ ಗೋಧಿ ಬೆಳೆದು ನೀರನ್ನು ಬಿಡುತ್ತಿದ್ದೇವು ಎಂದು ನುಡಿದಿರುತ್ತಾರೆ. ಪಂಚನಾಮೆ ಕಾಲಕ್ಕೆ

ಪೋಲಿಸರು ಸಹಿ ಪಡೆದಿರುವುದಿಲ್ಲ ಎಂದು ನುಡಿದಿರುತ್ತಾರೆ. ಆ ಸಂದರ್ಭರ್ದಲ್ಲಿ ಪೋಲಿಸರು ಏನಾದರೂ ಹೇಳಿಕೆ ದಾಖಲಿಸಿಕೊಂಡಿರುತ್ತಾರೆಯೇ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ನಂತರದಲ್ಲಿ ಪೋಲಿಸ ಠಾಣೆಗೆ ಹೋಗಿ ಹೇಳಿಕೆ ನೀಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ಸಾಕ್ಷಿಗೆ ನಿಪಿ 2 ನ್ನು ತೋರಿಸಿ ಅದರಲ್ಲಿ ಯಾವುದೇ ರೀತಿಯ ಬೆಳೆ ಕಾಣುತ್ತಿಲ್ಲ ಎಂದರೆ ಹೌದು ಎಂದು ನುಡಿದಿರುತ್ತಾರೆ. ನಮಗೆ ಮತ್ತು ಆರೋಪಿತರ ನಡುವೆ ಸಂಬಂಧ ಇಲ್ಲದ ಕಾರಣ ಅವರು ಅನುಕೂಲಸ್ಥರಿದ್ದ ಕಾರಣ ವಿನಾ ಕಾರಣ ಅವರೊಂದಿಗೆ ಜಗಳ ಮಾಡುತ್ತೀರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರು ಊರಲ್ಲಿ ಇಲ್ಲದ ಕಾರಣ ಅವರ ಜಮೀನಿನಲ್ಲಿ ಒಡ್ಡು ಒಡೆಯುವದು ಮಾಡುತ್ತಿದ್ದರು ಎಂದರೆ ಸರಿಯಲ್ಲ. ಆರೋಪಿತರು ಊರಿನಲ್ಲಿಲ್ಲದೇ ಇದ್ದರೂ ಸಹ ಅವರಿಗೆ ಹೊಡಿ ಬಡಿ ಮಾಡಿರುತ್ತೇವೆ ಎಂದು ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಆಪಾದಿಸಿದಂತೆ ಯಾವುದೇ ಘಟನೆ ನಡೆಯದೇ ಇದ್ದರೂ ಆರೋಪಿತರ ವಿರುದ್ಧ ಸುಳ್ಳು ದೂರನ್ನು ನೀಡಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ವ
ಜೆ ಎಂ ಎಫ್ ಸಿ, ಸಿಂದಗಿ.